**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್.79/2018**

**ಪಿ.ಡಬ್ಲ್ಯೂ - 1**

**ಪ್ರಮಾಣೀಕರಿಸಿದ ದಿನಾಂಕ:28.02.2025**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ : -**

4ನೇ ಪ್ರತಿವಾದಿ ಪೌರೋಹಿತ್ಯವನ್ನು ಮಾಡುತ್ತಾರೆ ಎಂದು ನನಗೆ ತಿಳಿದಿದೆ. 4ನೇ ಪ್ರತಿವಾದಿ ದಿ:21.01.2018 ರಂದು 1ನೇ ಪ್ರತಿವಾದಿಯಿಂದ ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಸ್ವತ್ತನ್ನು ಖರೀದಿಸಿರುವ ಬಗ್ಗೆ ಆ ಸಮಯದಲ್ಲಿ ಗೊತ್ತಿರಿಲಿಲ್ಲ, ಆದರೆ ನಂತರ ದಿ:26.02.2018 ರಂದು ನನಗೆ ತಿಳಿಯಿತು. ನಂತರ ನಾನು ದಾಖಲೆಗಳನ್ನ ತೆಗೆದುಕೊಂಡು 4ನೇ ಪ್ರತಿವಾದಿಯ ಮನೆಯ ಹತ್ತಿರ ಹೋಗಿ ಅವರು ಖರೀದಿಸಿರುವ ಬಗ್ಗೆ ಪ್ರಶ್ನಿಸಿರುತ್ತೇನೆ. 4ನೇ ಪ್ರತಿವಾಧಿಯ ಖರೀದಿ ಪತ್ರದಲ್ಲಿ ರಸ್ತೆಯ ಬಗ್ಗೆ ನಮೂದಿಸದ ಕಾರಣ, ಅವರಿಗೆ ನಾನು ರಸ್ತೆ ಇದ್ದರೂ ಸಹ ಏಕೆ ನಮೂದಿಸಿಲ್ಲ ಎಂದು ಕೇಳಿರುತ್ತೇನೆ. ನನ್ನ ಅಕ್ಕ ಸಹ, ದಾವಾ ಸ್ವತ್ತಿನ ಪಕ್ಕದ ಸ್ವತ್ತನ್ನು ಖರೀದಿಸಿದ್ದ ಕಾರಣ, ಅವರ ಖರೀದಿ ಪತ್ರದಲ್ಲಿ ಪ್ಯಾಸೇಜ್ ಬಗ್ಗೆ ನಮೂದಿಸಿದ್ದ ಕಾರಣ, ನನ್ನ ಖರೀದಿ ಪತ್ರದಲ್ಲಿ ನಮೂದಿಸದೇ ಇದ್ದರೂ ಸಹ ತೊಂದರೆ ಇರುವುದಿಲ್ಲ ಎಂದು, ನಾನು ನನ್ನ ಖರೀದಿದಾರರಿಗೆ ಪ್ರಶ್ನಿಸಿದಾಗ ಅವರು ಹೇಳಿರುತ್ತಾರೆ. ನನ್ನ ಖರೀದಿ ಪತ್ರದಲ್ಲಿ ಪ್ಯಾಸೇಜ್ ಇರುವ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿ.ಪಿ.2 ರಲ್ಲಿ ದಕ್ಷಿಣ ದಿಕ್ಕಿಗೆ ಜಿ.ಉದಯ್ ಕುಮಾರ್ ಮತ್ತು ಕೃಷ್ಣಮೂರ್ತಿ ರವರು ಬಿಟ್ಟುಕೊಟ್ಟಿರುವ ದಾರಿ ಎಂದು ನಮೂದಿಸಿರುವಲ್ಲಿ ಸಾಕ್ಷಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನಮೂದಿಸಿರುವುದಿಲ್ಲ ಎಂದರೆ, ಸಾಕ್ಷಿ ಸದರಿ ರವರು ಸದರಿ ದಾರಿಯನ್ನು ನನಗೆ ಬಿಟ್ಟುಕೊಟ್ಟಿದ್ದು, ಆದರೆ ನನ್ನ ಹೆಸರು ನಿರ್ದಿಷ್ಟವಾಗಿ ನಿ.ಪಿ.2 ರಲ್ಲಿ ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಿ:06.09.2018 ರಂದು 4ನೇ ಪ್ರತಿವಾದಿ ತಿದ್ದುಪಡಿ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಸದರಿ ದಾಖಲೆಯ ದೃಢೀಕೃತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದರಿಂದ ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ನಿ.ಡಿ.1 ರಲ್ಲಿ ಜಿ.ಎಸ್.ಉದಯ್ ಕುಮಾರ್ ಹಾಗೂ ಜಿ.ಎಸ್.ಕೃಷ್ಣಮೂರ್ತಿ ಹಾಗೂ ಎಸ್.ಸುಜಾತ ರವರು ಓಡಾಡಲು ಬಿಟ್ಟಕೊಂಡಿರುವ ಸಂದು ಎಂದು 4ನೇ ಪುಟದ ಸ್ವತ್ತಿನ

ವಿವರದ ದಕ್ಷಿಣ ದಿಕ್ಕಿನಲ್ಲಿ ತೋರಿಸಲಾಗಿದೆ ಎಂದರೆ ಸರಿ. ನಿ.ಪಿ.10 ರ ಪ್ರಕಾರ ನಾನು 4 ನೇ ಪ್ರತಿವಾದಿಯ ಖಾತೆಯನ್ನು ಅವರು ಚಕ್ಕುಬಂದಿಯನ್ನು ತಿದ್ದುಪಡಿ ಮಾಡಿಕೊಳ್ಳುವ ತನಕ ತಡೆಹಿಡಿಯಬೇಕೆಂದು ನೀಡಿದ್ದೆ ಎಂದರೆ ಸರಿ. ನಿ.ಡಿ.1 ರ ಪ್ರಕಾರ 4 ನೇ ಪ್ರತಿವಾದಿ ತಿದ್ದುಪಡಿ ಪತ್ರವನ್ನು ಮಾಡಿಕೊಂಡ ಕಾರಣ ನಾನು ದಾವೆಯಲ್ಲಿ ಕೋರಿದ ಪರಿಹಾರ ನನಗೆ ಈಗಾಗಲೇ ಸಿಕ್ಕಿದೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿ ತಮ್ಮ ಸ್ವತ್ತನ್ನು ಕ್ರಯಕ್ಕೆ ಪಡೆದ ದಿನದಿಂದ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿ ತಮ್ಮ ಸ್ವತ್ತಿಗೆ ಕಂದಾಯ ಕಟ್ಟುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ತಮ್ಮ ಸ್ವತ್ತಿನ ಸ್ವಾಧೀನದಲ್ಲಿ ತಾವು ಇದ್ದು, ಯಾವುದೇ ಅತಿಕ್ರಮಣವಾದ ಒತ್ತುವರಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ನನ್ನ ಖರೀದಿ ಪತ್ರದಲ್ಲಿ ಪಶ್ಚಿಮ ದಿಕ್ಕಿಗೆ ಸೆಟ್ ಬ್ಯಾಕ್ ಬಿಟ್ಟಿರುವ ಬಗ್ಗೆ ನಿರ್ದಿಷ್ಟವಾಗಿ ನಮೂದಿರುವುದಿಲ್ಲ. ನಾನು ಪಶ್ಚಿಮ ದಿಕ್ಕಿಗೆ ಕಾನೂನು ಬಾಹಿರವಾಗಿ ಯಾವುದೇ ಸೆಟ್ ಬ್ಯಾಕ್ ಇಲ್ಲದೇ ಇದ್ದರೂ ಕೂಡ ಕಿಟಕಿಯನ್ನು ಇಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಅವರು ಕಟ್ಟಿದ್ದ ಮನೆಯನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು 2003 ನೇ ಸಾಲಿನಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೇನೆ. ಸಾಕ್ಷಿಗೆ ಒಂದು ಕಿಟಕಿ ಇರುವ ಛಾಯಾಚಿತ್ರವನ್ನು ತೋರಿಸಿ, ಸದರಿ ಕಿಟಕಿಯನ್ನು ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದರೂ ಸಹ 3 ತಿಂಗಳ ಹಿಂದೆ ಇಡಲಾಗಿದೆ ಎಂದರೆ ಸಾಕ್ಷಿ, ಇದ್ದ ಕಿಟಕಿಯನ್ನು ರಿಪೇರಿ ಮಾಡಿರುವುದಾಗಿ ನುಡಿಯುತ್ತಾರೆ. ಸಾಕ್ಷಿ ಸದರಿ ರಿಪೇರಿ ಮಾಡಿರುತ್ತದೆ ಎಂದು ಹೇಳಲಾಗಿರುವ ಕಿಟಕಿ ಇರುವ ಛಾಯಾಚಿತ್ರ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ.2 ಎಂದು ಗುರುತಿಸಲಾಯಿತು. ನಾನು 2022 ನೇ ಸಾಲಿನಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು 4 ನೇ ಪ್ರತಿವಾದಿಯ ವಿರುದ್ಧ ಒಂದು ಬಾರಿ ಮಾತ್ರ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿಗೆ ಪೈಪುಗಳು ಒಡೆದಿರುವ ಛಾಯಾಚಿತ್ರವನ್ನು ತೋರಿಸಿ ಅವುಗಳನ್ನು 1 ಮತ್ತು 4 ನೇ ಪ್ರತಿವಾದಿಯ ಸ್ವತ್ತುಗಳಿಗೆ ಅಳವಡಿಸಲಾಗಿದ್ದ, ಈ ಹಿಂದೆ ಹಾಕಿದ್ದ ಪೈಪ್ ಗಳಾಗಿದ್ದು, ಅವುಗಳನ್ನು ಸಾಕ್ಷಿ ಕಿತ್ತೆಯೆಸಲು ಪ್ರಯತ್ನಿಸಿರುತ್ತಾರೆ ಎಂದು ಕೇಳಲಾಗಿ ಸಾಕ್ಷಿ ಸದರಿ ಪೈಪುಗಳು ತಾವಾಗಿಯೇ ಒಡೆದಿದ್ದವು ಎಂದು ನುಡಿಯುತ್ತಾರೆ.

ನಾನು ಪ್ರತಿವಾದಿ 4 ರವರ ಶೌಚಾಲಯದ ಪೈಪುಗಳನ್ನು ಬಂದ್ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ತಮ್ಮ ಮಾರಾಟಗಾರರಿಂದ ಪಡೆದ ಸ್ವತ್ತಿನಲ್ಲಿದ್ದ ಮನೆಯನ್ನು ರಿಪೇರಿ ಮಾಡಿಸಿಕೊಂಡು ಪುನರ್ ನಿರ್ಮಾಣ ಮಾಡಿ, ವಾಸವಿದ್ದು, ನನಗೆ ತೊಂದರೆ ಕೊಟ್ಟಿಲ್ಲದಿದ್ದರೂ ನಾನು ಅವರ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನಗೆ ಮಾರಾಟ ಮಾಡದೇ 4ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಕಾರಣದ ದ್ವೇಷದಿಂದ ಅವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಯಾವುದೇ ಒತ್ತುವರಿ ಮಾಡಿಕೊಂಡಿರುವುದಿಲ್ಲ, ನಾನೇ ಪಶ್ಚಿಮ ದಿಕ್ಕಿನಲ್ಲಿ 4ನೇ ಪ್ರತಿವಾಧಿಯ ಸ್ವತ್ತಿನಲ್ಲಿ ಒತ್ತುವರಿ ಮಾಡಿ ಕಿಟಕಿ ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಒತ್ತುವರಿ ಮಾಡಿರುವುದಿಲ್ಲ ಎಂದು ದಕ್ಷಿಣ ದಿಕ್ಕಿನಲ್ಲಿರುವ ಜಿ.ಎಸ್. ಉದಯ್ ಕುಮಾರ್ ಹೇಳಿದ್ದರೂ ಸಹ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವೆಯಲ್ಲಿ ಕೋರಿದ ಪರಿಹಾರವನ್ನು ಪಡೆಯುವ ಕಾನೂನು ಬದ್ದ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಯ ದಿನನಿತ್ಯದ ಚಟುವಟಿಕೆಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**